# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 25**
**ಸದಸ್ಯರ ಹೆಸರು : ಡಾ. ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)**
**ಉತ್ತರಿಸಬೇಕಾದ ದಿನಾಂಕ : 05.03.2025**
**ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

| ಕ್ರ ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಬೀದರ್ ನಗರದಲ್ಲಿರುವ ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಸ್ಥಾಪನೆಗೊಂಡು 20 ವರ್ಷಗಳಾದರೂ ಸರಕಾರ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸದಿರಲು ಕಾರಣಗಳೇನು; | ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ್ ಸಂಸ್ಥೆಯು 2005ರಲ್ಲಿ ಸ್ಥಾಪನಗೊಂಡಿದ್ದು, ಬೀದರ್ ಜಿಲ್ಲೆಯಲ್ಲಿ ಕೇಂದ್ರ ಸ್ಥಾನವನ್ನು ಹೊಂದಿದೆ. ಸದರಿ ಸಂಸ್ಥೆಯು ಸ್ಥಾಪನೆಗೊಂಡ ನಂತರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗಿರುತ್ತದೆ. ವಿಶ್ವವಿದ್ಯಾಲಯದ ಮುಖ್ಯದ್ವಾರ ನಿರ್ಮಾಣ, ಅತಿಥಿ ಗೃಹ ನಿರ್ಮಾಣ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಿಲಯ ನಿರ್ಮಾಣ, ರೈತರ ತರಬೇತಿ ಕೇಂದ್ರ ನಿರ್ಮಾಣ, Dairy Plant ನಿರ್ಮಾಣ, ಪಶುವೈದ್ಯಕೀಯ ಮಹಾವಿದ್ಯಾಲಯದ ಮೊದಲ ಅಂತಸ್ತಿನ ಕಾಮಗಾರಿ ನಿರ್ಮಾಣ, ಸಭಾಂಗಣ ನಿರ್ಮಾಣ, ಕುಲಪತಿ ಮತ್ತು ಅಧಿಕಾರಿಗಳ ನಿವಾಸಗಳ ನಿರ್ಮಾಣ, ಸ್ನಾತಕೋತ್ತರ ವಿದ್ಯಾರ್ಥಿಗಳ ವಸತಿ ನಿಲಯ ನಿರ್ಮಾಣ, ಜಾನುವಾರು ಮತ್ತು ಕುಕ್ಕಟ ಶೆಡ್‌ಗಳ ನಿರ್ಮಾಣ, Museum (ವಸ್ತು ಸಂಗ್ರಾಲಯ) ನಿರ್ಮಾಣ, Postmortem & Slaughter House ನಿರ್ಮಾಣ ಮತ್ತು 184 ಎಕರೆ ಜಮೀನಿಗೆ ತಂತಿ ಬೇಲಿ ಮತ್ತು ಕಂಪೌಂಡ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ. ಮುಂದಿನ ವರ್ಷಗಳಲ್ಲಿ ಮತ್ತೊಷ್ಟು ಅಭಿವೃದ್ಧಿ ಕೆಲಸಗಳಾದ ಮುಖ್ಯ ಆಡಳಿತ ಕಟ್ಟಡ ನಿರ್ಮಾಣ, ಅಂತರಿಕ ರಸ್ತೆ ಮತ್ತು ಒಳಚರಂಡಿ ನಿರ್ಮಾಣ, ಜಾನುವಾರುಗಳ ಶೆಡ್ ನಿರ್ಮಾಣ, ಹೊಸದಾಗಿ ನಿರ್ಮಿಸುವ ರಸ್ತೆಗಳಿಗೆ ಬೀದಿ ದೀಪಗಳನ್ನು ಅಳವಡಿಸುವಿಕೆ ಮತ್ತು ವಿಶ್ವವಿದ್ಯಾಲಯದ ಅತಿಥಿಗೃಹ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಯೋಜನೆಗಳನ್ನು ರೂಪಿಸಲಾಗಿದೆ.<br><br>ಮುಂದುವರೆದು, ಸದರಿ ಸಂಸ್ಥೆಯು |

<table>
<tr><td></td><td></td><td>ಸ್ಥಾಪನೆಗೊಂಡ ನಂತರ ಸಂಸ್ಥೆಯ ಆಧೀನದಲ್ಲಿ ನೂತನವಾಗಿ ಶಿವಮೊಗ್ಗ, ಹಾಸನ, ಗದಗ ಮತ್ತು ಅಥಣಿ ಇಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯಗಳು, ಹೈನು ವಿಜ್ಞಾನ ಮಹಾವಿದ್ಯಾಲಯ ಕಲಬುರಗಿ ಹಾಗೂ 05 ಪಶುಸಂಗೋಪನಾ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಮಾಡಲಾಗಿರುತ್ತದೆ. ಇದಲ್ಲದೆ ಜಾನುವಾರು ಸಂಶೋಧನಾ ಕೇಂದ್ರ, ಶ್ವಾನ ಸಂಶೋಧನಾ ಕೇಂದ್ರ, ಮೀನುಗಾರಿಕೆ ಸಂಶೋಧನಾ ಹಾಗೂ ಮಾಹಿತಿ ಕೇಂದ್ರಗಳು ಸ್ಥಾಪನೆಗೊಂಡು ಕಾರ್ಯ ನಿರ್ವಹಿಸುತ್ತಿವೆ.</td></tr>
<tr><td>ಆ)</td><td>ತೀರಾ ಹಿಂದುಳಿದ ಜಿಲ್ಲೆಯಲ್ಲಿ ಸ್ಥಾಪನೆಯಾದ ಈ ವಿಶ್ವವಿದ್ಯಾಲಯವು ಗ್ರಂಥಾಲಯ ಕಟ್ಟಡದಲ್ಲಿ ನಡೆಯುತ್ತಿರುವುದು ಸರಿಯೇ;</td><td>2005 ರಲ್ಲಿ ಸ್ಥಾಪನೆಯಾದ ಬೀದರ್ ವಿಶ್ವವಿದ್ಯಾಲಯಕ್ಕೆ ಪ್ರತ್ಯೇಕವಾಗಿ ಸ್ವಂತ ಆಡಳಿತ ಕಟ್ಟಡ ಇಲ್ಲದಿರುವುದರಿಂದ ಅದೇ ಆವರಣದಲ್ಲಿದ್ದ ಗ್ರಂಥಾಲಯ ಕಟ್ಟಡವನ್ನು ಮಾರ್ಪಾಡು ಮಾಡುವ ಮೂಲಕ ತಾತ್ಕಾಲಿಕವಾಗಿ ಆಡಳಿತ ಕಟ್ಟಡವನ್ನಾಗಿ ಬಳಸಲಾಗುತ್ತಿದೆ.</td></tr>
<tr><td>ಇ)</td><td>ವಿವಿಧ ವಿಭಾಗಗಳಿಗೆ, ಸಂಶೋಧನೆಗೆ, ಲ್ಯಾಬೋರೆಟರಿಗಳಿಗೆ ಮತ್ತು ಆಡಳಿತ, ಪರೀಕ್ಷಾ ವಿಭಾಗಗಳಿಗೆ ಸ್ವತಂತ್ರ ಕಟ್ಟಡಗಳ ನಿರ್ಮಾಣ ಮಾಡಲು ಮತ್ತು ಇನ್ನಿತರ ಮೂಲಭೂತ ಸೌಕರ್ಯ ಮತ್ತು ಪೂರೈಕೆಗೆ ಸರಕಾರ ಕ್ರಮ ಕೈಗೊಳ್ಳುವುದೇ;</td><td>ವಿವಿಧ ಸಂಶೋಧನಾ ಪ್ರಯೋಗಾಲಯಗಳಿಗೆ ಈಗಾಗಲೇ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದ್ದು, ಸಂಸ್ಥೆಗೆ ಸ್ವತಂತ್ರ ಆಡಳಿತ ಭವನ ನಿರ್ಮಾಣ ಮಾಡಲು ವಿಶ್ವವಿದ್ಯಾಲಯದಲ್ಲಿ ಅನುದಾನ ಕೊರತೆ ಇರುವುದರಿಂದ ಕಟ್ಟಡ ನಿರ್ಮಾಣಕ್ಕಾಗಿ ರೂ.58.28 ಕೋಟಿಗಳ ಅನುದಾನವನ್ನು ಒದಗಿಸುವಂತೆ ಕೋರಿ ಕಾರ್ಯದರ್ಶಿ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಇವರಿಗೆ ದಿನಾಂಕ:29-10-2024 ರಂದು ಪತ್ರ ಬರೆಯಲಾಗಿರುತ್ತದೆ.</td></tr>
<tr><td>ಈ)</td><td>ವಿಶ್ವವಿದ್ಯಾಲಯದಲ್ಲಿ ಶೇ.70% ರಷ್ಟು ಭೋಧಕ ಮತ್ತು ಭೋಧಕೇತರ ಹುದ್ದೆಗಳು ಖಾಲಿಯಿದ್ದು ಅವುಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದೇ?</td><td>ಪ್ರಸ್ತುತ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಮಂಜೂರಾದ ಹುದ್ದೆ, ಭರ್ತಿಯಾದ ಹುದ್ದೆ ಮತ್ತು ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರಸ</th><th>ಹುದ್ದೆ</th><th>ಮಂ ಹುದ್ದೆ</th><th>ಭರ್ತಿ ಹುದ್ದೆ</th><th>ಖಾಲಿ ಹುದ್ದೆ</th></tr>
<tr><td></td><td colspan="4">ಬೊಧಕ ಹುದ್ದೆಗಳು</td></tr>
<tr><td>1</td><td>ಪ್ರಾಧ್ಯಾಪಕರು</td><td>137</td><td>18</td><td>119</td></tr>
<tr><td>2</td><td>ಸಹ ಪ್ರಾಧ್ಯಾಪಕರು</td><td>197</td><td>40</td><td>157</td></tr>
<tr><td>3</td><td>ಸಹಾಯಕ ಪ್ರಾಧ್ಯಾಪಕರು</td><td>460</td><td>210</td><td>250</td></tr>
<tr><td colspan="2">ಒಟ್ಟು</td><td>794</td><td>268</td><td>526</td></tr>
<tr><td colspan="5"></td></tr>
<tr><td>4</td><td>ಬೋಧಕೇತರ ಹುದ್ದೆಗಳು</td><td>1577</td><td>228</td><td>1349</td></tr>
</table></td></tr>
</table>

| | | |
|---|---|---|
| | | ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ 70% ರಷ್ಟು ಬೋಧಕ ಮತ್ತು ಬೋಧಕೇತರ ಹುದ್ದೆಗಳನ್ನು ಹಂತ-ಹಂತವಾಗಿ ನೇರ ನೇಮಕಾತಿ, ಹೊರಗುತ್ತಿಗೆ ಹಾಗೂ ನಿಯೋಜನೆ ಮೇರೆಗೆ ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆಯಿಂದ ಸಹಮತಿ ನೀಡಲಾಗಿದ್ದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮವಹಿಸಲಾಗುವುದು. |

**ಸಂಖ್ಯೆ:ಪಸಂಮೀ 59 ಪಅಸೇ 2025**

**ಕೆ. ವೆಂಕಟೇಶ್**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು